ವಿಜಯವಾಣಿ
ಕನ್ನಡಿಗರ ಧ್ವನಿ

# ಭವಿಷ್ಯದ ಭರವಸೆಯ 'ಸಮರ್ಥ'ರು!



ಎನ್‌ಡಿಟಿವಿ ಟೊಯೋಟಾ ವಿವಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಭಾಗವಹಿಸಲಿರುವ ಜೈನ್ ವಿವಿ ಕಾಲೇಜಿನ ತಂಡ.

■ ಮೋಹನ್‌ದಾಸ್ ಮರಕಡ

ಕರ್ನಾಟಕ ರಾಜ್ಯದಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ. ಯಾವುದೇ ಕ್ಷೇತ್ರದಲ್ಲಿ ಗಮನಿಸಿದರೂ ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನೀಯ ಸಾಧನೆ ಮಾಡಿರುವ ರಾಜ್ಯದ ಪ್ರತಿಭಾ ಸಂಪನ್ನರು ಕಾಣಸಿಗುತ್ತಾರೆ. ಕ್ರೀಡಾ ಕ್ಷೇತ್ರವೂ ಇದಕ್ಕೆ ಹೊರತಲ್ಲ. ಜಿಆರ್ ವಿಶ್ವನಾಥ್, ಎರಪಳ್ಳಿ ಪ್ರಸನ್ನ, ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ಪಂಕಜ್ ಅಡ್ವಾಣಿ, ಅಶ್ವಿನಿ ಪೊನ್ನಪ್ಪ ಮೊದಲಾದ ಪ್ರತಿಭಾಶಾಲಿಗಳ ಜತೆ ಜತೆಯಲ್ಲಿಯೇ ಕಿರಿಯ ಸಾಧಕರೂ ಮೂಡಿಬರುತ್ತಿದ್ದಾರೆ. 20 ವಯಸ್ಸಿನಲ್ಲಿಯೇ ವಿವಿಧ ವಯೋಮಿತಿ ಕ್ರಿಕೆಟ್ ಟೂರ್ನಿಗಳಲ್ಲಿ ಅಗಾಧ ಸಾಧನೆ ಮಾಡಿ ರಾಜ್ಯ ತಂಡದ ಕದ ತಟ್ಟುತ್ತಿರುವ 'ಸಮರ್ಥ'ರು ಬೆಂಗಳೂರಿನ ಜೈನ್ ವಿವಿ ಕ್ರಿಕೆಟ್ ತಂಡದಲ್ಲಿ ಹೊರಹೊಮ್ಮುತ್ತಿದ್ದಾರೆ.

ಫೆ.23ರಿಂದ ಟೊಯೋಟಾ ಎನ್‌ಡಿಟಿವಿ ಅಂತರ್ ವಿವಿ ಟಿ20 ಕ್ರಿಕೆಟ್ ನಡೆಯಲಿದೆ. ದೇಶದ 4 ವಲಯಗಳ 8 ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿವೆ. ಅಖಿಲ ಭಾರತ ಅಂತರ್ ವಲಯ ವಿವಿ ಮಟ್ಟದ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ತಂಡಗಳು ಟಿಯುಸಿಸಿ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿವೆ. ದಕ್ಷಿಣ ವಲಯದಿಂದ ಬೆಂಗಳೂರಿನ ಜೈನ್ ವಿವಿ, ಚೆನ್ನೈನ ಮದ್ರಾಸ್ ವಿವಿ ತಂಡಗಳು ಪಾಲ್ಗೊಳ್ಳುತ್ತಿವೆ. ಬೆಂಗಳೂರಿನ ಜೈನ್ ವಿವಿ ತಂಡ ಕಳೆದ ಜನವರಿಯಲ್ಲಿ ಮಣಿಪಾಲದಲ್ಲಿ ನಡೆದಿದ್ದ ಅಂತರ್ ವಲಯ ವಿವಿ ಮಟ್ಟದ ಕ್ರಿಕೆಟ್ ಟೂರ್ನಿಯಲ್ಲಿ ಬಾಂಬೆ ವಿವಿಯನ್ನು ಸೋಲಿಸಿ ಪ್ರಶಸ್ತಿ ಗೆದ್ದು ಟಿಯುಸಿಸಿ ಕ್ರಿಕೆಟ್ ಟೂರ್ನಿಗೆ ಆಯ್ಕೆಯಾಗಿತ್ತು.

ಜೈನ್ ವಿವಿ ತಂಡ ಚಾಂಪಿಯನ್ ಆಗುವಲ್ಲಿ ಎಲ್ಲ ಆಟಗಾರರ ಕೊಡುಗೆ ಇತ್ತು. ಆದರೂ ತಂಡದ ಆಧಾರಸ್ತಂಭಗಳಂತೆ ಆಡುತ್ತಿರುವ ಸಮರ್ಥ್ ಆರ್, ಕೌನೇನ್ ಅಬ್ಬಾಸ್ ಮತ್ತು ಕೆ ದಿನೇಶ್ ಕೊಡುಗೆ ತಂಡಕ್ಕೆ ಪ್ರಮುಖ ಶಕ್ತಿ.

## 'ಸಮರ್ಥ' ಆಲ್‌ರೌಂಡರ್

ಜೈನ್ ವಿವಿಯ ಪ್ರಮುಖ ಆಟಗಾರ ಸಮರ್ಥ್ ಆರ್. ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಆಗಿದ್ದರೂ, ಆರಂಭಿಕನಾಗಿಯೂ ಆಡಿದ ಅನುಭವ. ಜತೆಗೆ ಉಪಯುಕ್ತ ಅರೆಕಾಲಿಕ ಬೌಲರ್. ಬಲಗೈ ಬ್ಯಾಟ್ಸ್‌ಮನ್ ಹಾಗೂ ಸ್ಪಿನ್ ಬೌಲರ್ ಆಗಿರುವ ಇವರು, ಕರ್ನಾಟಕ ರಾಜ್ಯವನ್ನು 13 ವಯೋಮಿತಿ, 15, 16, 19 ಮತ್ತು 25 ವಯೋಮಿತಿಗಳಲ್ಲಿ ಪ್ರತಿನಿಧಿಸಿದ ಅನುಭವ ಹೊಂದಿದ್ದಾರೆ. ಕರ್ನಾಟಕ ಪ್ರೀಮಿಯರ್ ಲೀಗ್‌ನ (ಕೆಪಿಎಲ್) 2ನೇ ಆವೃತ್ತಿಯಲ್ಲಿ ಬೆಂಗಳೂರು ಬ್ರಿಗೇಡಿಯರ್ಸ್ ತಂಡವನ್ನು ಪ್ರತಿನಿಧಿಸಿದ್ದರು.

ಕಳೆದ ವರ್ಷ ಮೊಯಿನ್-ಉದ್-ದೌಲಾ ಹಾಗೂ ಶಫಿ ದಾರಾಷಾ ಟ್ರೋಫಿ ಟೂರ್ನಿಯಲ್ಲಿಯೂ 21 ವರ್ಷದ ಸಮರ್ಥ್ ಸಮರ್ಥವಾಗಿಯೇ ಕರ್ನಾಟಕ ತಂಡದ ಪರ ಆಡಿದ್ದರು. ವಿವಿಧ ಟೂರ್ನಿಗಳಲ್ಲಿ ನೀಡಿದ ಉತ್ತಮ ನಿರ್ವಹಣೆಯ ಫಲವಾಗಿ ಸಮರ್ಥ್ ಪ್ರಸಕ್ತ ವರ್ಷ ಕರ್ನಾಟಕದ ರಣಜಿ ಸಂಭಾವ್ಯ ಆಟಗಾರರಾಗಿ ಸ್ಥಾನ ಪಡೆದಿದ್ದರು. ಆದರೆ ಅಂತಿಮ 15ರ ಬಳಗದಲ್ಲಿ ಸ್ಥಾನ ಪಡೆಯುವ ಅವಕಾಶ ಕೈತಪ್ಪಿತ್ತು. ತಮ್ಮ ಸಮರ್ಥ ನಿರ್ವಹಣೆಯನ್ನು ಮುಂದುವರಿಸುತ್ತಿರುವ ಸಮರ್ಥ್ ಮುಂದೊಂದು ದಿನ ಕರ್ನಾಟಕ ರಾಜ್ಯ ತಂಡವನ್ನು ರಣಜಿ ಟ್ರೋಫಿಯಲ್ಲಿ ಪ್ರತಿನಿಧಿಸುವ ಕನಸು ಹೊತ್ತಿದ್ದಾರೆ. ಕಳೆದ ಕ್ರಿಕೆಟ್ ಋತುವಿನಲ್ಲಿ ಸಮರ್ಥ್ ಒಟ್ಟಾರೆ 1,151 ರನ್ ಗಳಿಸಿದ್ದರಲ್ಲದೆ, 19 ವಯೋಮಿತಿ ತಂಡದ ಪರ ಆಡುವಾಗ ಗುಜರಾತ್ ವಿರುದ್ಧ ದ್ವಿಶತಕ ಬಾರಿಸಿದ್ದು ಅವರ ಅವಿಸ್ಮರಣೀಯ ಸಾಧನೆ. ರಣಜಿಯಲ್ಲಿ ಅವಕಾಶ ಲಭಿಸಿದರೆ ಶ್ರೇಷ್ಠ ಆಟವಾಡಿ ರಾಷ್ಟ್ರೀಯ ತಂಡಕ್ಕೆ ಸೇರುವ ಹಂಬಲ, ಕನಸು ಸಮರ್ಥ್ ಅವರಲ್ಲಿದೆ.



ಮೂಲತಃ ಮೈಸೂರಿನವರಾದ ಸಮರ್ಥ್ ಕಳೆದ ಶಫಿ ದಾರಾಷಾ ಟ್ರೋಫಿ ಗೆದ್ದ ಕರ್ನಾಟಕ ಇಲೆವೆನ್ ತಂಡದಲ್ಲಿ ಪ್ರಮುಖ ಆಟಗಾರರಾಗಿದ್ದರು. ಗಣೇಶ್ ಸತೀಶ್ ನೇತೃತ್ವದ ತಂಡದಲ್ಲಿ ಓಪನರ್ ಆಗಿ ಆಡಿದ ಸಮರ್ಥ್‌ಗೆ ರಣಜಿ ಆಟಗಾರರಾದ ಕೆಬಿ ಪವನ್, ಸಿಎಂ ಗೌತಮ್, ಕೆಪಿ ಅಪ್ಪಣ್ಣ, ಅಭಿಮನ್ಯು ಮಿಥುನ್, ಅಮಿತ್ ವರ್ಮ ಸೂಕ್ತ ಸಲಹೆ-ಮಾರ್ಗದರ್ಶನ ನೀಡಿದ್ದರು. ಇದನ್ನು ಸಂಪೂರ್ಣವಾಗಿ ಬಳಸಿಕೊಂಡ ಸಮರ್ಥ್, ಆರಂಭಿಕನಾಗಿ ಉತ್ತಮ ಪ್ರದರ್ಶನ ನೀಡಿದ್ದರು. ಅದರಲ್ಲೂ, ಬಾಂಗ್ಲಾದೇಶ ವಿರುದ್ಧ ಪ್ರಥಮ ಇನಿಂಗ್ಸ್‌ನಲ್ಲಿ ಸೊನ್ನೆಗೆ ಔಟಾಗಿದ್ದ ಸಮರ್ಥ್ ದ್ವಿತೀಯ ಇನಿಂಗ್ಸ್‌ನಲ್ಲಿ 82 ರನ್ ಬಾರಿಸಿ ತಮ್ಮ ಆಟದ ಮೌಲ್ಯ ತೋರಿಸಿದ್ದರು.

## ಕೌನೇನ್ ಅಬ್ಬಾಸ್ ನಾಯಕ

ಅಖಿಲ ಭಾರತ ಅಂತರ್ ವಲಯ ವಿವಿ ಮಟ್ಟದ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಜೈನ್ ವಿವಿ ತಂಡದ ನಾಯಕ ಕೌನೇನ್ ಅಬ್ಬಾಸ್. ಟಿಯುಸಿಸಿ ಟೂರ್ನಿಯಲ್ಲೂ ಇವರೇ ಜೈನ್ ತಂಡವನ್ನು ಮುನ್ನಡೆಸಲಿದ್ದಾರೆ. ಉಪಯುಕ್ತ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಆಗಿರುವ ಅಬ್ಬಾಸ್ ತಂಡ ಸಂಕಷ್ಟದಲ್ಲಿದ್ದಾಗ ಸದಾ ನೆರವಿಗೆ ನಿಲ್ಲುವರು. 23 ವರ್ಷದ ಈ ಆಟಗಾರ ಕರ್ನಾಟಕ ಪರ 22 ವಯೋಮಿತಿ ಮತ್ತು ಕರ್ನಾಟಕ ಎ ತಂಡದಲ್ಲಿ ಆಡಿದ್ದಾರೆ. ಕರ್ನಾಟಕ ಎ ತಂಡದ ಪರ ಆಡಿದ ಪದಾರ್ಪಣಾ ಪಂದ್ಯದಲ್ಲಿಯೇ ರಾಜಸ್ಥಾನ ಎ ವಿರುದ್ಧ 151 ರನ್ ಸಿಡಿಸಿದ್ದು ಇವರ ಜೀವನಶ್ರೇಷ್ಠ ಸಾಧನೆ. ಕಳೆದ ಶಫಿ ದಾರಾಷಾ ಟೂರ್ನಿಯಲ್ಲಿ ಬಾಂಗ್ಲಾದೇಶ ವಿರುದ್ಧ ಮ್ಯಾಚ್ ವಿನ್ನಿಂಗ್ ಅಜೇಯ 57 ರನ್ ಮಾಡಿದ್ದು ಕೂಡ ಸರ್ವಶ್ರೇಷ್ಠ ನಿರ್ವಹಣೆ. ದಿ ಗ್ರೇಟ್ ವಾಲ್ ಎಂದೇ ಹೆಸರಾಗಿದ್ದ ರಾಹುಲ್ ದ್ರಾವಿಡ್‌ರನ್ನು ಪ್ರೇರಣೆಯಾಗಿರಿಸಿಕೊಂಡಿರುವ ಅಬ್ಬಾಸ್ ಕೂಡ ರಾಜ್ಯ ತಂಡವನ್ನು ರಣಜಿಯಲ್ಲಿ ಪ್ರತಿನಿಧಿಸುವ ಕನಸು ಕಂಡಿದ್ದಾರೆ. ಈಗಾಗಲೇ 25 ವಯೋಮಿತಿ ರಾಜ್ಯ ತಂಡದಲ್ಲಿ ಆಡಿ ಉತ್ತಮ ಸಾಧನೆ ಮಾಡಿರುವ ಅಬ್ಬಾಸ್ ಶೀಘ್ರದಲ್ಲೇ ರಾಜ್ಯ ರಣಜಿ ತಂಡ ಸೇರುವ ಭರವಸೆ ಇಟ್ಟುಕೊಂಡಿದ್ದಾರೆ.



## ದಿನೇಶ್ ಎನ್ ಕೀಪರ್

ಜೈನ್ ವಿವಿ ತಂಡದ ವಿಕೆಟ್‌ಕೀಪರ್ ಬ್ಯಾಟ್ಸ್‌ಮನ್ ದಿನೇಶ್ ಎನ್ ಬೋರ್ವಾಂಕರ್. ಮಧ್ಯಮ ಕ್ರಮಾಂಕದಲ್ಲಿ ಉಪಯುಕ್ತ ಬ್ಯಾಟ್ಸ್‌ಮನ್. 21 ವರ್ಷದ ದಿನೇಶ್ ಕೂಡ ಈಗಾಗಲೇ ಕರ್ನಾಟಕ ರಾಜ್ಯವನ್ನು ವಿವಿಧ ವಯೋಮಿತಿ ತಂಡದಲ್ಲಿ ಪ್ರತಿನಿಧಿಸಿದ್ದಾರೆ. ಕಳೆದ 7 ವರ್ಷಗಳಲ್ಲಿ ದಿನೇಶ್, 13ರಿಂದ 22 ವಯೋಮಿತಿ ವಿಭಾಗಗಳಲ್ಲಿ ರಾಜ್ಯದ ಪರ ಆಡುತ್ತಲೇ ಬಂದಿದ್ದಾರೆ. 19 ವಯೋಮಿತಿ ಏಕದಿನ ಹಾಗೂ ಚತುರ್ದಿನ ಕ್ರಿಕೆಟ್‌ನಲ್ಲಿ ರಾಜ್ಯದ ಪರ ಆಡಿರುವ ದಿನೇಶ್, 2011ರಲ್ಲಿ ಶಫಿ ದಾರಾಷಾ ಟ್ರೋಫಿಯಲ್ಲೂ ಆಡಿದ್ದರು. ಆ ವರ್ಷ ಶಫಿ ದಾರಾಷಾ ಟ್ರೋಫಿಯಲ್ಲಿ 2 ಇನಿಂಗ್ಸ್ ಆಡಿ 106 ರನ್ ಮಾಡಿದ್ದರು. ಬರೋಡ ವಿರುದ್ಧ ಅಜೇಯ 80 ರನ್ ಗಳಿಸಿ ತಮ್ಮ ಪ್ರತಿಭೆಯನ್ನು ತೋರ್ಪಡಿಸಿದ್ದರು. ಕರ್ನಾಟಕ 19 ವಯೋಮಿತಿ ತಂಡದ ಪರ ಆಡುವಾಗ 8 ಇನಿಂಗ್ಸ್‌ಗಳಲ್ಲಿ 400 ರನ್ ಮಾಡಿದ್ದರು. ಇದರಲ್ಲಿ ಮುಂಬೈ ವಿರುದ್ಧ ಶತಕ(100) ಮತ್ತು ಜಾರ್ಖಂಡ್ ವಿರುದ್ಧ ಶತಕ (132 ರನ್) ಬಾರಿಸಿದ್ದು ಗಮನೀಯ ಸಾಧನೆ. 2012-13ರ ಸಾಲಿನಲ್ಲಿ ದಿನೇಶ್ ಆಡಿದ ಫಸ್ಟ್ ಡಿವಿಜನ್ ಲೀಗ್‌ನಲ್ಲಿ 10 ಇನಿಂಗ್ಸ್‌ಗಳಲ್ಲಿ 1 ಶತಕ, 2 ಅರ್ಧಶತಕ ಸಹಿತ 515 ರನ್, 15 ವಿಕೆಟ್‌ಕೀಪಿಂಗ್ ಬಲಿ ಪಡೆದಿದ್ದರು. ಅಂತರ್ ವಲಯ 25 ವಯೋಮಿತಿ ಕ್ರಿಕೆಟ್‌ನಲ್ಲಿ ಆಡಿದ 2 ಇನಿಂಗ್ಸ್‌ಗಳಲ್ಲಿ 1 ಶತಕ ಸಹಿತ 145 ರನ್ ಮಾಡಿದ್ದರು.

